## ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

---

ಸಂಖ್ಯೆ: ಇಡಿ[ಟಿ] ಆರ್1ಎ/ 3126

ದಿನಾಂಕ: **09.01.2012**

---

# <u>ಪ್ರಕಟಣೆ</u>

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಶಕ್ತಿನಗರದಲ್ಲಿ ನಿರ್ಮಿಸಿದ ಉಷ್ಣ ಸ್ಥಾವರಕ್ಕಾಗಿ ಭೂಮಿ/ಮನೆ ಕಳೆದುಕೊಂಡ ಭೂಸಂತ್ರಸ್ತ ಕುಟುಂಬಕ್ಕೆ ಸೇರಿದ ಅರ್ಹ ಅಭ್ಯರ್ಥಿಗಳಿಂದ 45 ಟ್ರೈನಿ ಗ್ರೇಡ್ 'ಡಿ' ತರಬೇತಿಗಾಗಿ ಅರ್ಜಿಗಳನ್ನು ಆಜ್ಞಾಪತ್ರ ಸಂಖ್ಯೆ ಎ1 ಪಿ1 ಎ/4268 ದಿನಾಂಕ 21.09.2005 ರಲ್ಲಿ ಆಹ್ವಾನಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಬಂದಿದ್ದ 554 ಅರ್ಜಿಗಳಲ್ಲಿ ಪ್ರಾಥಮಿಕವಾಗಿ ಅರ್ಹತಾ ಷರತ್ತುಗಳನ್ನು ಪೂರೈಸುವಂತೆ ಕಂಡು ಬಂದ್ದಿದ್ದ 196 ಅರ್ಜಿಗಳನ್ನು ತಾತ್ಕಾಲಿಕವಾಗಿ ಮುಂದಿನ ಆಯ್ಕೆ ಪ್ರಕ್ರಿಯೆಗೆ ಅರ್ಹವೆಂದು ಪ್ರಕಟಿಸಿ ಆಕ್ಷೇಪಣೆಗಳೇನಾದರು ಇದ್ದಲ್ಲಿ ಸಂಬಂಧಿತರು ಸಲ್ಲಿಸಲು ಅವಕಾಶ ನೀಡಲಾಗಿತ್ತು. ಬಂದಿದ್ದ ಆಕ್ಷೇಪಣೆಗಳನ್ನು ಪರಿಶೀಲನೆಗೊಳಪಡಿಸಿ ಒಟ್ಟು 199 ಅರ್ಜಿದಾರರು ಮುಂದಿನ ಆಯ್ಕೆ ಪ್ರಕ್ರಿಯೆಯಲ್ಲಿ ಅರ್ಹರೆಂದು ನಂತರ ಪ್ರಕಟಿಸಲಾಗಿತ್ತು. ಈ ಕ್ರಮವನ್ನು ಪ್ರಶ್ನಿಸಿ ಅನರ್ಹಗೊಳಿಸಲಾದ ಕೆಲ ಅಭ್ಯರ್ಥಿಗಳು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿ ತಡೆ ಆಜ್ಞೆ ಪಡೆದಿದ್ದರು. ಈ ತಡೆ ಆಜ್ಞೆಗಳ ತೆರವಿನ ನಂತರ ರಿಟ್ ಅರ್ಜಿ ಸಂಖ್ಯೆ 9800/07 ಹಾಗು ಸಂಬಂಧಿತ ರಿಟ್ ಅರ್ಜಿಗಳಲ್ಲಿನ ದಿನಾಂಕ 14.03.2011 ರ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಕ್ಕನುಗುಣವಾಗಿ ಈ ರಿಟ್ ಅರ್ಜಿದಾರರನ್ನೂ ಮುಂದಿನ ಪ್ರಕ್ರಿಯೆಯಲ್ಲಿ ಮೇಲ್ಕಂಡ 199 ಅರ್ಜಿದಾರರೊಂದಿಗೆ ಪರಿಗಣಿಸಿ ದಿನಾಂಕ 20.06.2011 ರಿಂದ 22.06.2011 ರವೆರೆಗೆ ಹಾಗು ದಿನಾಂಕ 25.08.2011 ರಂದು ದೈಹಿಕ ಪರೀಕ್ಷೆ ಹಾಗು ಮೌಖಿಕ ಸಂದರ್ಶನಗಳನ್ನು ನಡೆಸಲಾಯಿತು. ಮೌಖಿಕ ಸಂದರ್ಶನ ಪೂರ್ವ ಅರ್ಜಿದಾರರುಗಳ ಮೂಲ ದಾಖಲೆಗಳ ಪರಿಶೀಲನೆಯಲ್ಲಿ ಹಾಗು ಸಂದರ್ಶನದಲ್ಲಿ ಕಂಡು ಬಂದ ಮಾಹಿತಿಯಿಂದ ಈ ಅಭ್ಯರ್ಥಿಗಳಲ್ಲಿ ಹಲವರ ಕುಟುಂಬದಲ್ಲಿ ಒಬ್ಬರು ಅಥವಾ ಹೆಚ್ಚು ಸದಸ್ಯರು ನಿಗಮದಲ್ಲಿ ಈಗಾಗಲೇ ಉದ್ಯೋಗ ಪಡೆದಿರುವುದು ಖಚಿತಪಟ್ಟಿದೆ. ಈ ಅರ್ಜಿದಾರರು ತರಬೇತಿ/ಉದ್ಯೋಗಕ್ಕೆ ಅರ್ಹತೆ ಹೊಂದುವುದಿಲ್ಲ. ಅದರಂತೆ ಇನ್ನು ಹಲವು ಪ್ರಕರಣಗಳಲ್ಲಿ ನ್ಯಾಯಾಲಯಗಳಲ್ಲಿ ವಿವಾದಗಳು ಬಾಕಿ ಇದ್ದು, ಇತ್ಯಾರ್ಥವಾಗುವವರೆಗೆ ಪ್ರಕರಣಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಸಾಧ್ಯವಿಲ್ಲವೆನ್ನುವ ಅಂಶವು ಕಂಡು ಬಂದಿತ್ತು ಹಾಗು ಇನ್ನೂ ಕೆಲ ಪ್ರಕರಣಗಳಲ್ಲಿ ಕುಟುಂಬದ ಇತರ ಸದಸ್ಯರಿಂದ ನಿರಾಪೇಕ್ಷಣೆ ಪತ್ರ ಹಾಜರುಪಡಿಸಿರುವುದಿಲ್ಲ.

2] ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿ ದೈಹಿಕ ಪರೀಕ್ಷೆ/ಸಂದರ್ಶನಕ್ಕೆ ಆಹ್ವಾನಿಸಿದ್ದ/ಹಾಜರಾದ ಎಲ್ಲಾ ಅರ್ಜಿದಾರರನ್ನು ಈ ಪ್ರಕ್ರಿಯೆಯಲ್ಲಿ ಪರಿಗಣಿಸಿ ಮೌಲ್ಯಮಾಪನ ಮಾಡಿದ್ದಾಗ್ಯೂ ಅಂತಿಮ ಸ್ಥಿತಿಯನ್ನು ಸಂಬಂಧಪಟ್ಟವರ ಮಾಹಿತಿಗಾಗಿ ಕೆಳಕಂಡಂತೆ ಪ್ರಕಟಿಸಲಾಗಿದೆ.

ಮುಂದುವರೆದಿದೆ....

i] ದೈಹಿಕ ಪರೀಕ್ಷೆಯಲ್ಲಿ ಅರ್ಹರೆಂದು ಕಂಡು ಬಂದ ಹಾಗು ಮೌಖಿಕ ಸಂದರ್ಶನಕ್ಕೆ ಹಾಜರಾಗಿ ಮೌಖಿಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆಗೆ ಪರಿಗಣಿಸಬಹುದಾದ ಒಟ್ಟು 74 ಅರ್ಜಿದಾರರ ಹೆಸರು, ಮೌಖಿಕ ಪರೀಕ್ಷೆಯಲ್ಲಿ ಗಳಿಸಿದ ಅಂಕ ಇತ್ಯಾದಿ ವಿವರಗಳನ್ನೊಳಗೊಂಡ ತಖ್ತೆಯನ್ನು ಅನುಬಂಧ-1 ಎಂದು ಪ್ರಕಟಿಸಿದೆ. ಇವರು ಹಾಗು ಅನುಬಂಧ-2 ರಲ್ಲಿ ವಿಧಿಸಲಾಗಿರುವ ಷರತ್ತುಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸುವ ಅರ್ಜಿದಾರರನ್ನು ಸೇರಿಸಿ ಅಂಕಗಳ ಆಧಾರದ ಮೇಲೆ ಹಾಗು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡಿ 45 ಅಭ್ಯರ್ಥಿಗಳನ್ನು ಅಂತಿಮವಾಗಿ ಆಯ್ಕೆ ಮಾಡಲಾಗುವುದು.

ii] ದೈಹಿಕ ಪರೀಕ್ಷೆಯಲ್ಲಿ ಅರ್ಹರೆಂದು ಕಂಡು ಬಂದ ಹಾಗು ಮೌಖಿಕ ಸಂದರ್ಶನಕ್ಕೆ ಹಾಜರಾಗಿದ್ದಾಗ್ಯೂ ಭೂಮಿ/ಮನೆ ಸ್ವಾದೀನಪಡಿಸಿಕೊಳ್ಳಲು ಹೊರಡಿಸಲಾದ ಪ್ರಾಥಮಿಕ/ಅಂತಿಮ ಗೆಜೆಟ್ ಪ್ರಕಟಣೆಗನುಸಾರ ಒಂದೇ ಕುಟುಂಬಕ್ಕೆ ಅಥವಾ ಒಂದೇ ಸರ್ವೆ ನಂ./ಮನೆ ನಂ.ಗೆ ಸೇರಿರುವ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಓರ್ವ ಅಭ್ಯರ್ಥಿಯನ್ನು ತಮ್ಮೊಳಗೆ ಆಯ್ಕೆ ಮಾಡಿಕೊಂಡು ನಿರಾಪೇಕ್ಷಣೆ ಪತ್ರ ಸಲ್ಲಿಸುವ, ಎಲ್ಲೆಲ್ಲಿ ನ್ಯಾಯಾಲಯದಲ್ಲಿ ವ್ಯಾಜ್ಯ/ವಿವಾದಗಳಿವೆಯೊ ಬಗೆಹರಿಸಿಕೊಳ್ಳುವ, ಕುಟುಂಬದ ಇತರ ಸದಸ್ಯರುಗಳಿಂದ ನಿರಾಪೇಕ್ಷಣ ಪತ್ರ ಸಲ್ಲಿಸುವ ಅವಶ್ಯಕತೆ ಇರುವಂತಹ ಅಭ್ಯರ್ಥಿಗಳ ವಿವರಗಳನ್ನೊಳಗೊಂಡ ತಖ್ತೆಯನ್ನು ಅನುಬಂಧ-2 ರಲ್ಲಿ ಪ್ರಕಟಿಸಲಾಗಿದೆ. ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗೆ ಒಂದೇ ಕುಟುಂಬಕ್ಕೆ ಅಥವಾ ಒಂದೇ ಸರ್ವೆ ನಂ./ಮನೆ ನಂ.ಗೆ ಸೇರಿರುವ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಓರ್ವ ಅಭ್ಯರ್ಥಿಯನ್ನು ತಮ್ಮೊಳಗೆ ಆಯ್ಕೆ ಮಾಡಿಕೊಂಡು ನಿರಾಪೇಕ್ಷಣೆ ಪತ್ರ ಸಲ್ಲಿಸುವಲ್ಲಿ ವಿಫಲರಾದಲ್ಲಿ ಅಂತಹ ಕುಟುಂಬದ/ಸರ್ವೆ ನಂ./ಮನೆ ನಂ.ಗೆ ಸೇರಿರುವ ಹಾಗು ಮೌಖಿಕ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಅಭ್ಯರ್ಥಿಯನ್ನು ಅನುಬಂಧ-1 ರಲ್ಲಿಯ ಇತರ ಅಭ್ಯರ್ಥಿಯೊಂದಿಗೆ ಸೇರಿಸಿ ಆಯ್ಕೆ ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗುವುದು. ಎಲ್ಲೆಲ್ಲಿ ನ್ಯಾಯಾಲಯದಲ್ಲಿ ವ್ಯಾಜ್ಯ/ವಿವಾದಗಳಿವೆಯೊ ಅಲ್ಲಲ್ಲಿ ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗೆ ಬಗೆಹರಿಸಿಕೊಂಡು ಮತ್ತು/ಅಥವಾ ಕುಟುಂಬದ ಇತರ ಸದಸ್ಯರುಗಳಿಂದ ನಿರಾಪೇಕ್ಷಣ ಪತ್ರ ಸಲ್ಲಿಸುವಲ್ಲಿ ವಿಫಲರಾದಲ್ಲಿ ಮುಂದಿನ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

iii] ದಿನಾಂಕ 21.09.2005 ರಂದು ಅರ್ಜಿ ಆಹ್ವಾನಿಸಿ ಹೊರಡಿಸಲಾದ ಆಜ್ಞಾಪತ್ರಕ್ಕನುಸಾರ ಈ ಕಾರ್ಯ ಯೋಜನೆಯು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ಇದುವರೆಗೆ ಉದ್ಯೋಗ ದೊರಕಿರದ ಭೂಸಂತ್ರಸ್ತ ಹಾಗು ಮನೆಗಳನ್ನು ಕಳೆದುಕೊಂಡ ಕುಟುಂಬಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುವುದರಿಂದ ಹಾಗೂ ಸಂದರ್ಶನದ ಪ್ರಕ್ರಿಯೆಯಲ್ಲಿ ಭಾಗಿಯಾದ 220 ಅಭ್ಯರ್ಥಿಗಳಲ್ಲಿ 92 ಅಭ್ಯರ್ಥಿಗಳಿಗೆ ಸೇರಿದ ಕುಟುಂಬಕ್ಕೆ ಅಥವಾ ಅಭ್ಯರ್ಥಿಗಳು ಉದಾಹರಿಸಿದ ಸರ್ವೆ ನಂ./ಮನೆ ನಂ. ಗೆ ಸಂಬಂಧಿಸಿದಂತೆ ಈಗಾಗಲೆ ನಿಗಮದಿಂದ ವಿವಿಧ ಮೂಲಗಳಿಂದ ಉದ್ಯೋಗ ಒದಗಿಸಿರುವುದು ಅಥವಾ ಇನ್ನಿತರ ನ್ಯೂನತೆಗಳು ಸಂದರ್ಶನದಲ್ಲಿ ಕಂಡು ಬಂದಿರುವುದರಿಂದ ಈ ಅಭ್ಯರ್ಥಿಗಳನ್ನು ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು. ಇಂತಹ ಅಭ್ಯರ್ಥಿಗಳ ವಿವರಗಳು ಅನುಬಂಧ-3 ರಲ್ಲಿವೆ.

ಮುಂದುವರೆದಿದೆ....

iv] ಸಂದರ್ಶನಕ್ಕೆ ಅಥವಾ/ಮತ್ತು ದೈಹಿಕ ಪರೀಕ್ಷೆಗೆ ಹಾಜರಾಗಲು ವಿಫಲರಾದ ಮತ್ತು ದೈಹಿಕ ಪರೀಕ್ಷೆಯಲ್ಲಿ ಅನರ್ಹರೆಂದು ತೀರ್ಮಾನಿಸಲಾದ ಒಟ್ಟು 18 ಅಭ್ಯರ್ಥಿಗಳ ಪಟ್ಟಿಯು ಅನುಬಂಧ–4 ರಲ್ಲಿರುವಂತಿದೆ. ಈ ಅಭ್ಯರ್ಥಿಗಳು ಸಹ ಮುಂದಿನ ಆಯ್ಕೆ ಪ್ರಕ್ರಿಯೆಗೆ ಅರ್ಹರಿರುವುದಿಲ್ಲ.

v] ಈ ಸ್ಲಾಟ್‌ಗಳಲ್ಲಿ ಒಟ್ಟು 7 ಸ್ಲಾಟ್‌ಗಳನ್ನು ಪರಿಶಿಷ್ಟ ಜಾತಿಗೆ ನೀಡಲು ಉದ್ದೇಶಿಸಲಾಗಿದ್ದು ಆಯ್ಕೆ ಚೌಕಟ್ಟಿನಲ್ಲಿರುವ ಒಟ್ಟು ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿಗಳನ್ನು ಪ್ರತ್ಯೇಕಗೊಳಿಸಿ ಅಂಕಗಳ ಆಧಾರದ ಮೇಲೆ 7 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

3] ಈ ಪ್ರಸ್ತಾವನೆ ಕುರಿತು ಸಂಬಂಧಪಟ್ಟ ಅಥವಾ ಬಾಧೆಗೊಳಬಹುದಾದ ಅರ್ಜಿದಾರರು ತಮ್ಮ ಹೇಳಿಕೆ ಏನಾದರು ಇದ್ದಲ್ಲಿ ಅಥವಾ ಸೂಚಿತ ದಾಖಲೆ ಮಂಡಿಸುವುದಿದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗೆ ಈ ಕೆಳಕಂಡವರಿಗೆ ತಲುಪುವಂತೆ ಸಲ್ಲಿಸುವುದು. ಬರಬಹುದಾದ ಹೇಳಿಕೆ/ದಾಖಲೆಗಳನ್ನು ವಿಮರ್ಶಿಸಿ ಅಥವಾ ಯಾವುದೆ ಹೇಳಿಕೆ ದಾಖಲೆಗಳು ಬರದಿದ್ದಲ್ಲಿ ಮೇಲ್ಕಂಡ ಮಾದರಿಯಲ್ಲಿ ಆಜ ಟ್ರೈನಿ ಗ್ರೇಡ್ ಡಿ ಸ್ಲಾಟ್‌ಗಳ ಆಯ್ಕೆಯನ್ನು ಅಂತಿಮಗೊಳಿಸಿ ಪ್ರಕಟಿಸಲಾಗುವುದು.

ಕಾರ್ಯನಿರ್ವಾಹಕ ನಿರ್ದೇಶಕರು[ಶಾಖೋತ್ಪನ್ನ]
ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ
ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
ಶಕ್ತಿನಗರ – 584 170
ರಾಯಚೂರು ಜಿಲ್ಲೆ.

ಕಾರ್ಯನಿರ್ವಾಹಕ ನಿರ್ದೇಶಕರು[ಶಾಖೋತ್ಪನ್ನ]